ಇ) ಅರ್ಜಿದಾರರು ಪೂರಕ ದಾಖಲೆಗಳನ್ನು (ವಯಸ್ಸಿನ, ವರಮಾನ ಹಾಗೂ ವಾಸದ ಬಗ್ಗೆ) ಒದಗಿಸದೆ ಇರುವುದರಿಂದ ವಿಳಂಭವಾಗಿರುತ್ತದೆ.

ಈ) ಸರ್ಕಾರದ ಆದೇಶದ ಮಾರ್ಗಸೂಚಿಗಳನ್ನು ಅನುಸರಿಸಿ ಪಿಂಚಣಿಯನ್ನು ಮಂಜೂರು ಮಾಡುತ್ತಿದ್ದು, ಯೋಜನೆಯಡಿಯಲ್ಲಿ ತಾರತಮ್ಯ ಆಗಿರುವುದಿಲ್ಲ.

ರಾಜ್ಯದಲ್ಲಿ 2008 & 2009 ರಲ್ಲಿ ಮಂಜೂರಾಗಿರುವ ಐ.ಟಿ.ಐ. ಕಾಲೇಜುಗಳು

441 (742) ಪುಟ್ಟರಂಗಶೆಟ್ಟಿ. ಸಿ. (ಚಾಮರಾಜನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2008 ಮತ್ತು 2009 ರಲ್ಲಿ ಮಂಜೂರಾಗಿರುವ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಯಾವ ಯಾವ ಮತಕ್ಷೇತ್ರಕ್ಕೆ ಮಂಜೂರಾಗಿರುತ್ತವೆ;

ಇ) ಚಾಮರಾಜನಗರ ಮತಕ್ಷೇತ್ರಕ್ಕೆ ಕಾಲೇಜು ಮಂಜೂರಾಗಿದೆಯೇ;

ಈ) ಮಂಜೂರಾತಿ ನೀಡದಿರಲು ಕಾರಣವೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) 2008 ರಲ್ಲಿ 10 ಐಟಿಐಗಳು ಮಂಜೂರಾಗಿರುತ್ತವೆ.

2009 ರಲ್ಲಿ ಯಾವುದೇ ಐಟಿಐಗಳು ಮಂಜೂರಾಗಿರುವುದಿಲ್ಲ.

ಆ)

1	ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ
2.	ಕೊರಟಗೆರೆ, ತುಮಕೂರು ಜಿಲ್ಲೆ	ಕೊರಟಗೆರೆ ವಿಧಾನಸಭಾ ಕ್ಷೇತ್ರ
3	ಕೊಪ್ಪ, ಚಿಕ್ಕಮಗಳೂರು ಜಿಲ್ಲೆ	ಶೃಂಗೇರಿ ವಿಧಾನಸಭಾ ಕ್ಷೇತ್ರ
4	ಅಂಕೋಲಾ, ಉತ್ತರ ಕನ್ನಡ ಜಿಲ್ಲೆ	ಕಾರವಾರ ವಿಧಾನಸಭಾ ಕ್ಷೇತ್ರ

5	ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ	ಶಿರಸಿ, ವಿಧಾನಸಭಾ ಕ್ಷೇತ್ರ
6	ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ	ಹೊಸಕೋಟೆ, ವಿಧಾನಸಭಾ ಕ್ಷೇತ್ರ
7	ಸೊರಬ, ಶಿವಮೊಗ್ಗ ಜಿಲ್ಲೆ	ಸೊರಬ, ವಿಧಾನಸಭಾ ಕ್ಷೇತ್ರ
8	ಸಾಗರ, ಶಿವಮೊಗ್ಗ ಜಿಲ್ಲೆ	ಸಾಗರ, ವಿಧಾನಸಭಾ ಕ್ಷೇತ್ರ
9	ಶಿಗ್ಗಾಂವ, ಹಾವೇರಿ ಜಿಲ್ಲೆ	ಶಿಗ್ಗಾಂವ, ವಿಧಾನಸಭಾ ಕ್ಷೇತ್ರ
10	ಹುಬ್ಬಳ್ಳಿ-ಧಾರವಾಡ, ಧಾರವಾಡ ಜಿಲ್ಲೆ	ಹುಬ್ಬಳ್ಳಿ ಗ್ರಾಮಾಂತರ, ವಿಧಾನಸಭಾ ಕ್ಷೇತ್ರ

ಇ) ಇಲ್ಲ.

ಈ) ಚಾಮರಾಜನಗರ ಜಿಲ್ಲೆಯಲ್ಲಿ ಮೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, 10 ಅನುದಾನಿತ ಮತ್ತು 11 ಅನುದಾನರಹಿತ ಖಾಸಗೀ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಕಾರಣ ಮಂಜೂರಾತಿ ನೀಡಲಾಗಿರುವುದಿಲ್ಲ.

442 (772) ಶ್ರೀ ಪುಟ್ಟೇಗೌಡ ಸಿ.ಎಸ್. (ಶ್ರವಣ ಬೆಳಗೊಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಸಮುದಾಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಹೋಬಳಿವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು;

ಆ) ಸದರಿ ಸಮುದಾಯ ಆಸ್ಪತ್ರೆಗಳಲ್ಲಿ ವೈದ್ಯರುಗಳ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೊರತೆ ಇರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನು